ಕಥೆ



ಸೋಮು ರೆಡ್ಡಿ

ಕಲೆ: ಮುರಳೀಧರ್ ರಾಥೋಡ್

# ಪಾಲು

ಹುಬ್ಬಳ್ಳಿಯ ಗೋಕುಲ ರಸ್ತೆಯಲ್ಲಿರುವ ಮಡಿಲು ಮೆಟರ್ನಿಟಿ ಹಾಸ್ಪಿಟಲ್‌ನ ಮೂರನೇ ಮಹಡಿಯ ಐಸಿಯುನ ಏಳನೇ ನಂಬರ್ ಬೆಡ್ ಮೇಲೆ ನಿಸ್ತೇಜವಾಗಿ ಮಲಗಿ ಯಶೋದಾ ಸಾವು ಬದುಕಿನ ನಡುವೆ ಹೋರಾಡುತ್ತಿದ್ದಳು. ಅವಳನ್ನ ನೋಡಿಕೊಳ್ಳಲು ರುಕ್ಮವ್ವಳೊಬ್ಬಳನ್ನೇ ಬಿಟ್ಟು ಸಂಕಪ್ಪ ಬೆಳಗುಮುಂಜೆಲೇ ಹಳೇ ಬಸ್‌ಸ್ಟ್ಯಾಂಡಿಗೆ ಬಂದು ಮುಕ್ಕು ನೀರಿನಿಂದ ಬಾಯಿ ಮುಕ್ಕಳಿಸಿ ಮಾರಿ ತೊಳೆದಿದ್ದ. ಚಹಾದಂಗಡಿಯೊಂದರಲ್ಲಿ ಸಿಂಗಲ್ ಚಹಾ ಆರ್ಡರ್ ಮಾಡಿ ಟವೆಲ್ಲಿನಿಂದ ಮಾರಿ ಒರೆಸಿಕೊಳ್ಳುತ್ತಾ ಕುಳಿತಿದ್ದ.

ಹುಬ್ಬಳ್ಳಿಯ ತಣ್ಣಗಿನ ಹವೆಯ ಆ ದಿವ್ಯಪ್ರಸನ್ನತೆಯ ಬೆಳಗು ಅವನನ್ನ ಆಪ್ತವಾಗಿ ಆತುಗೊಂಡಿತ್ತು. ಬಸ್ಸುಗಳ ಅಗಾಧ ಹಾರ್ನು, ಕಂಡಕ್ಟರ್‌ಗಳ ಲಯಬದ್ಧ ಸೀಟಿ, ತಿಂಡಿ-ತಿನಿಸಿನ ವ್ಯಾಪಾರಸ್ಥರ ಕಗ್ಗಕೂಗು, ಹೋಟೆಲ್‌ಗಳ ವಹಿವಾಟು, ಎದ್ನೋ, ಬಿದ್ನೋ ಅಂತ ಅವಸರಿಸುವ ಪ್ರಯಾಣಿಕರು- ಈ ಎಲ್ಲ ಪ್ರಾಪಂಚಿಕ ಜೀವಂತಿಕೆಯ ಸೆಳಕು ಅವನಲ್ಲೊಂದು ಅನೂಹ್ಯವಾದ ತನ್ಮಯತೆಯನ್ನು ಬಿತ್ತಿತ್ತು. ನಿನ್ನೆ ದಿನ ಅವನ ಬಾಳಲ್ಲಿ ಅಷ್ಟೆಲ್ಲಾ ದುರಂತ ನಡೆದರೂ ಇದೀಗ ಅದ್ಯಾವುದೂ ನಡೆದೇಯಿಲ್ಲವೇನೋ ಎಂಬಂತೆ ಆ ತನ್ಮಯತೆ ಅವನ ಖಬರು ತಪ್ಪಿಸುತ್ತಿತ್ತು.

ಸಂಕಪ್ಪನತ್ತ ದುರುದುರುನೇ ನಡೆದು ಬಂದ ವೇಟರ್ ಚಹಾದ ಲೋಟವನ್ನು ಟೇಬಲ್ ಮೇಲೆ ಕುಕ್ಕಿದಂತಿಟ್ಟು ಮಿಂಚು ಹುಳುವಿನಂತೆ ಗಾಯಬ್ ಆದ. ಅವನ ತಿರಾರುಗೇಡಿತನಕ್ಕೆ ಲಘುವಾಗಿ ಬೆಚ್ಚಿದ ಸಂಕಪ್ಪ ಅವನನ್ನ ತುಸು ಹಳಿದು ಚಹಾದ ಲೋಟವನ್ನು ಕೈಗೆತ್ತಿ ಉಫ್... ಉಫ್ ಎಂದು ಊದಿ ಅದರ ಬಿಸಿ ಸಂಭಾಳಿಸುತ್ತಾ ಲೋಟವನ್ನ ತುಟಿಗಿಟ್ಟುಕೊಂಡ. ಇನ್ನೂ ಎರಡು ಗುಟುಕು ಚಹಾ ಗಂಟಲಲ್ಲಿ ಇಳಿದಿರಲಿಲ್ಲ; ಚಹಾ ಒಮ್ಮೆಲೇ ನೆತ್ತಿಗೇರಿಬಿಟ್ಟಿತು. ಲೋಟವನ್ನ ಕೈಬಿಟ್ಟು ಗಡುಸಾಗಿ ಕೆಮ್ಮತೊಡಗಿದ. ಚಹಾ ಅರ್ಧ ಟೇಬಲ್ ಮೇಲೆ, ಇನ್ನರ್ಧ ಅವನ ಮೈಮೇಲೆ ಚೆಲ್ಲಿತು. ಅಲ್ಲಿದ್ದ ಜನ ಅವನ ತ್ರಾಸು ನೋಡಿ ನೆರವಿಗೆ ಧಾವಿಸುತ್ತಿದ್ದಂತೆಯೇ ಕೆಮ್ಮು ತಹಬಂದಿಗೆ ತಂದುಕೊಂಡು ನಾಲ್ಕಾರು ಬಾರಿ ಹೂಂಕರಿಸಿ ಸುಧಾರಿಸಿಕೊಂಡ. ಚಹಾದಿಂದ ಗಲೀಜಾಗಿದ್ದ ಬಟ್ಟೆಯನ್ನು ತೊಳೆದುಕೊಳ್ಳುವ ಸಲುವಾಗಿ ವಾಶ್‌ಬೇಸನ್‌ಗೆ ಬಂದ.



‘ಯಶೋದಾ ನೆನಸ್ಕೊಂಡಿರಬೋದಾ. ಅದಕ್ ಚಾ ನೆತ್ತಿಗೇರ್ತು ಅಂತ ಕಾಣಸ್ತದ’ ಅಂದುಕೊಂಡ. ಆಕೆಗೆ ನಿನ್ನೆ ರಾತ್ರಿ ವೆಂಟಿಲೇಟರ್ ಅಳವಡಿಸಿ, ಮೂತ್ರದ ನಳಿಕೆಯನ್ನ ಇಂಜೆಕ್ಟ್ ಮಾಡುವಾಗ ಆಕೆ ಸಣ್ಣ ಮಗುವಿನಂತೆ ಒದ್ದಾಡಿದ ದೃಶ್ಯ ಕಣ್ಮುಂದೆ ಬಂದಂತಾಗಿ ಅವನ ಕಣ್ಣಲ್ಲಿ ನೀರು ತುಂಬಿಕೊಂಡಿತು. ದುಃಖ ನಿಯಂತ್ರಣಕ್ಕೊಳಪಡದೇ ಕಣ್ಣೀರು ಕಪಾಳಗುಂಟ ಹರಿದವು. ಅದೇ ವಾಶ್‌ಬೇಷನ್‌ನಲ್ಲೇ ಮುಖ ಹುದುಗಿಸಿ ದುಃಖ ಕರಗೋವರೆಗೂ ಅತ್ತು